# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.58/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ನಾಗರಾಜ್ | CW: 4 | PW: 4 |
| ತಂದೆಯ ಹೆಸರು | : | ವೆಂಕಟೇಶಪ್ಪ | | |
| ವಯಸ್ಸು | : | 38 | | |
| ವೃತ್ತಿ | : | ಮನೆಕೆಲಸ | | |
| ವಾಸಸ್ಥಳ | : | ಗೋವಿನಕೋವಿ | | |

ದಿನಾಂಕಃ 04.03.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ-

ಆರೋಪಿಗಳು ಮತ್ತು ಚಾಸಾ 1 ರಿಂದ 3 ರವರು ಗೊತ್ತು. ತೋಟದಲ್ಲಿ ಕಲ್ಲು ಹಾಕುತ್ತಾ ಬರುತ್ತಿದ್ದರು. ಅದಕ್ಕೆ ನಮ್ಮ ತೋಟದಲ್ಲಿ ಯಾಕೆ ಕಲ್ಲು ಹಾಕುತ್ತಿದ್ದೀರಾ ಎಂದು ಚಾಸಾ 1 ರವರು ಕೇಳಿದ್ದಕ್ಕೆ 1 ನೇ ಆರೋಪಿಯು ಚಾಸಾ 1 ರವರಿಗೆ ಬೈದು ಹೊಡೆಯುವುದಕ್ಕೆ ಹೋದರು. ನಾನು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದು ಅಲ್ಲಿಗೆ ಹೋಗಿ ಜಗಳ ಬಿಡಿಸಿರುತ್ತೇನೆ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

1 ನೇ ಆರೋಪಿಯ ಜೊತೆ 2-3 ನೇ ಆರೋಪಿಗಳು ಸಹ ಚಾಸಾ 1 ರವರ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಗಲಾಟೆಯಾದ ದಿನಾಂಕ 14.09.2022 ಮಧ್ಯಾಹ್ನ 12.30 ಗಂಟೆ ಎಂದರೆ ಸರಿ. ಆರೋಪಿಗಳು ಚಾಸಾ 1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಾನು, ಚಾಸಾ 2 ಮತ್ತು 3 ರವರು ಜಗಳ ಬಿಡಿಸಿರುತ್ತೇವೆ ಎಂದರೆ ಸರಿ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ.ಹೆಚ್ ಎಂ ಎಸ್ ವಕೀಲರಿಂದಃ-

ಚಾಸಾ 1 ನನಗೆ ಏನಾಗಬೇಕು ಎಂದರೆ ನನ್ನ ಚಿಕ್ಕಪ್ಪನ ಮಗ. ಗಲಾಟೆಯಾದ ಸಮಯದಲ್ಲಿ ನಾನು ಎಲ್ಲಿದ್ದೆ ಎಂದರೆ ಸಾಕ್ಷಿಯು ಅದೇ ತೋಟದಲ್ಲಿ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಗಲಾಟೆಯ ಸ್ಥಳದಿಂದ ನಾನು ಎಷ್ಟು ದೂರದಲ್ಲಿದ್ದೆ ಎಂದರೆ ಸುಮಾರು 30-40 ಅಡಿ ದೂರದಲ್ಲಿ ಎಂದು ನುಡಿಯುತ್ತಾರೆ. ಗಲಾಟೆಯ ಸಮಯದಲ್ಲಿ ಎಷ್ಟು ಜನ ಇದ್ದರು ಎಂದರೆ ಸುಮಾರು 6-7 ಜನ ಅವರ ಹೆಸರುಗಳೆಂದರೆ ಗೊತ್ತಿಲ್ಲ. ನನ್ನ ತಂದೆ ಹಾಗೂ 1 ನೇ ಆರೋಪಿಯ ನಡುವೆ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಸಿವಿಲ್ ದಾವೆಗೆ ಅನುಕೂಲವಾಗಲೀ ಎಂದು ನಾನು ಮತ್ತು ಚಾಸಾ 1 ರವರು ಸೇರಿ ಆರೊಪಿಗಳ ವಿರುದ್ಧ ಸುಳ್ಳು ದೂರು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.